International Research Journal of Humanities, Language and Literature
ISSN: (2394-1642)
Impact Factor 5.401 Volume 6, Issue 1, January 2019
Association of Academic Researchers and Faculties (AARF)
Website-www.aarf.asia, Email : editor@aarf.asia , editoraarf@gmail.com

# ಇಳಾಭಾರತ: ಹೆಣ್ಣಿನ ಕಣ್ಣೋಟದಲ್ಲಿ ಮಹಾಭಾರತ

ಡಾ.ಭಾರತಿ ದೇವಿ.ಪಿ
ಕನ್ನಡ ಸಹಾಯಕ ಪ್ರಾಧ್ಯಾಪಕಿ,
ಸರ್ಕಾರಿ ಗೃಹವಿಜ್ಞಾನ ಕಾಲೇಜು,
ಹೊಳೆನರಸೀಪುರ-573211

ನಮ್ಮ ನಡುವೆ ಮಹಾಭಾರತದ ವಿಭಿನ್ನ ಕಥನಗಳಿವೆ. ಹಲವು ಬಗೆಯಲ್ಲಿ ಜನರು ಮತ್ತು ಸಮುದಾಯಗಳು ಮಹಾಭಾರತ, ರಾಮಾಯಣಗಳನ್ನು ತಮ್ಮದಾಗಿಸಿಕೊಂಡಿವೆ. ಆಧುನಿಕ ಸಂದರ್ಭದಲ್ಲೂ ಪುರಾಣ ಕಥೆಗಳನ್ನು ಮರುವ್ಯಾಖ್ಯಾನ ಮಾಡುವ, ಮತ್ತೆ ಕಟ್ಟುವ ಕೆಲಸಗಳು ನಡೆಯುತ್ತಲೇ ಇವೆ. ನಮ್ಮ ಪುರಾಣ ಇತಿಹಾಸಗಳ ಕಥನ ವಿನ್ಯಾಸವನ್ನು ಗಮನಿಸಿದರೆ ಅವು ಪಿತೃಸಂಸ್ಕೃತಿಯ ಕಟ್ಟುವಿಕೆಗಳಾಗಿಯೇ ಕಾಣುತ್ತವೆ. ಇಲ್ಲಿ ಹೆಣ್ಣು ಪ್ರಧಾನ ಭೂಮಿಕೆಯಲ್ಲಿ ಇಲ್ಲದೇ ಆನುಷಂಗಿಕವಾಗಿ ಕಾಣುತ್ತಾಳೆ. ಹೀಗಿರುವಾಗ ಜೋರಾಗಿ ಕೇಳಿಸುವ ದನಿಗಳ ಆಚೆಗೆ ಅಡಗಿಹೋಗಿರುವ, ಮೆತ್ತಗಾಗಿರುವ ದನಿಗಳನ್ನು ಹುಡುಕುವ ಕೆಲಸವನ್ನು ಸಂವೇದನಾಶೀಲ ಮನಸ್ಸುಗಳು ಮಾಡುತ್ತಲೇ ಬಂದಿವೆ. ಸೀತೆ, ಊರ್ಮಿಳೆ, ದ್ರೌಪದಿ, ಮಂಡೋದರಿ ಮುಂತಾದವರ ಕಣ್ಣಲ್ಲಿ ಆಗಿಹೋದದ್ದನ್ನು ಕಾಣುವ ಪ್ರಯತ್ನಗಳು ನಡೆದಿವೆ. ಇಂಗ್ಲಿಷಿನಲ್ಲಿ ಚಿತ್ರಾ ಬ್ಯಾನರ್ಜಿ ದಿವಾಕರುಣಿ ಅವರ 'ಪ್ಯಾಲೇಸ್ ಆಫ್ ಇಲ್ಯೂಷನ್ ', ದೇವದತ್ತ ಪಟ್ನಾಯಕ್ ಅವರ 'ಜಯ' ಮುಂತಾದ ಕೃತಿಗಳನ್ನು ನೋಡಬಹುದು. ಕನ್ನಡದಲ್ಲಿ ಮಹಾಭಾರತದ ಸ್ತ್ರೀ ಪಾತ್ರಗಳನ್ನು ಒಡಲೊಳಗೆ ಇರಿಸಿಕೊಂಡು ಅನೇಕ ನಾಟಕಗಳೂ ರಚನೆಗೊಂಡಿವೆ. ಈ ಸಾಲಿನಲ್ಲಿ ಡಾ.ಧರಣಿದೇವಿ ಮಾಲಗತ್ತಿಯವರು ಷಟ್ಪದಿಯಲ್ಲಿ ರಚಿಸಿದ 'ಇಳಾಭಾರತ' ತನ್ನೊಳಗಿನ ಹೆಣ್ಣುಗಳ ವಿಭಿನ್ನ ನೋಟ, ದನಿಗಳ ಮೂಲಕ ನಾವು ಕಾಣದ ಮುಡುಕು ಮೂಲೆಗಳನ್ನು ಬಗೆದು ತೋರುತ್ತದೆ.

'ಇಳಾಭಾರತ' ತೆರೆದುಕೊಳ್ಳುವುದು ಸತ್ಯವತಿ ತನ್ನ ಸೊಸೆಯರಾದ ಅಂಬಿಕೆ ಅಂಬಾಲಿಕೆಯರಿಗೆ ಚಂದ್ರವಂಶದ ಕಥೆಯನ್ನು ಬಿಚ್ಚಿಡುವುದರ ಮೂಲಕ. ಹೀಗೆ ಭೀಷ್ಮಪ್ರತಿಜ್ಞೆಯ ಮೂಲಕ ಕತೆಯನ್ನು ಶುರುಮಾಡುವ ಸತ್ಯವತಿ ಚಂದ್ರವಂಶದಲ್ಲಿ ಆಗಿಹೋದ ದುರ್ಬಲರಾದ, ಅಧಿಕಾರ ಮೋಹ ಹೊಂದಿದ, ಅಹಂಕಾರಿಗಳಾದ ವಿವಿಧ ವ್ಯಕ್ತಿತ್ವಗಳ ಮತ್ತು ಅವರ ಹಿಡಿತದಲ್ಲಿ ನಲುಗಿದ ಹೆಣ್ಣುಗಳ ಕತೆ ಹೇಳುತ್ತಾ ಹೋಗುತ್ತಾಳೆ. ಹೀಗೆ ಹೇಳುವ ಬಗೆ ಶ್ರೇಷ್ಠ ವಂಶ, ಹಿರಿಮೆ ಗರಿಮೆ ಎಲ್ಲದರೊಳಗಿನ ಪೊಳ್ಳುತನ ತೋರಿಸುತ್ತಾ ಪ್ರಧಾನಧಾರೆಯ ನಿರೂಪಣೆಯೊಳಗಣ ತೆರಪುಗಳನ್ನು ಕಾಣಿಸುತ್ತಾ ಹೋಗುತ್ತದೆ. ಈ ಬಗೆಯ ನಿರೂಪಣೆ ಅನೇಕ ಬಗೆಗಳಲ್ಲಿ ವಿಶಿಷ್ಟವಾಗಿದೆ. ಅವುಗಳನ್ನು ಈ ಬಗೆಯಲ್ಲಿ ನೋಡಬಹುದಾಗಿದೆ.

© Association of Academic Researchers and Faculties (AARF)
A Monthly Double-Blind Peer Reviewed Refereed Open Access International e-Journal - Included in the International Serial Directories.

**ನಿರೂಪಣೆ:**

ಈ ಕೃತಿಯಲ್ಲಿ ಕತೆ ಹೆಣ್ಣಿನ ನಿರೂಪಣೆಯಾಗಿದೆ. ನಿಡುಗಾಲ ಬದುಕಿ ಸೊಸೆಯರ ಜೊತೆಗೆ ವಾನಪ್ರಸ್ಥದ ಹಾದಿಯಲ್ಲಿ ಸತ್ಯವತಿ ನಿಧಾನವಾಗಿ ತಮ್ಮ ವಂಶದ ಕತೆಗಳನ್ನು ತೆರೆದಿಡಲು ಶುರು ಮಾಡುತ್ತಾಳೆ. 'ಸ್ಮೃತಿ ದುಕೂಲದಿ ಬಿಗಿದು ತಂದೆನು, ಹಿತವನಹಿತವ ಬಿಚ್ಚುವೆನು, ಮೇಣ್ ಜತನ ಮಾಡಿದ ಗಂಟುಗಳನಿವ ನೋಡಲೆಳಸುವಿರೇಂ' ಎನ್ನುತ್ತಾ ಕತೆಯನ್ನು ಶುರು ಮಾಡುತ್ತಾಳೆ. ಎದುರಿಗೆ ಕುಳಿತ ಹೆಣ್ಣುಮಕ್ಕಳನ್ನು ಉದ್ದೇಶಿಸಿ ಈಕೆ 'ಅಂಬುರುಹ ನಯನೆಯರೆ ಹೇಳುವೆ' ಎನ್ನುತ್ತಾಳೆ. ಚಂದ್ರವಂಶದಂತಹ ದೊಡ್ಡ ರಾಜಮನೆತನದ ಸೊಸೆಯರಾಗಿ ಸತ್ಯವತಿ, ಅಂಬಿಕೆ, ಅಂಬಾಲಿಕೆಯರು ಕಂಡ ಬವಣೆಗಳು ಕಡಿಮೆಯಲ್ಲ. ಜೊತೆಗೆ ಹಿಂದೆ ಆಗಿ ಹೋದವರು ಅನುಭವಿಸಿದ ನೋವುಗಳು, ನಡುವೆಯೇ ಕಾಣುವ ಅವರ ಚೈತನ್ಯ ಎಲ್ಲವನ್ನೂ ಇಲ್ಲಿ ಸತ್ಯವತಿ ಹೇಳುತ್ತಾ ಹೋಗುತ್ತಾಳೆ. ಇಲ್ಲಿ ಹಿರಿಮೆಯನ್ನು ಸಾರುವುದಕ್ಕಿಂತ ಹೆಚ್ಚಾಗಿ ಪರಸ್ಪರರ ನೋವನ್ನು ಹಂಚಿಕೊಳ್ಳುವ, ಆಗಿ ಹೋದವರ ಬದುಕಿನ ಕತೆಗಳ ಮೂಲಕ ಶಕ್ತಿ ಪಡೆಯುವ ಬಗೆ ಕಾಣುತ್ತದೆ. ಹೀಗಾಗಿ ಇಲ್ಲಿನ ನಿರೂಪಣೆ ವಿಶಿಷ್ಟವೆನಿಸುತ್ತದೆ.

**ಬೆಂದು ಹೊಳೆಯುವವರು:**

ಇಲ್ಲಿನ ಬಹುತೇಕ ಹೆಣ್ಣುಮಕ್ಕಳು ಬದುಕಿನ ಬವಣೆಯಲ್ಲಿ ಬೆಂದು ಹೊಳಪು ಪಡೆದವರು. ಬಹುಪತ್ನಿತ್ವ, ಹೆಣ್ಣಿನ ಪರಿಶುದ್ಧತೆಗೆ ಸಂಬಂಧಿಸಿದ ಸಾಮಾಜಿಕ ಕಟ್ಟಳೆಗಳು, ರಾಜರ ಲೋಲುಪತೆಗೆ ಈ ಸ್ತ್ರೀಯರು ಬಲಿಯಾದವರು. ಅಶೋಕಸುಂದರಿ, ಶಚಿ, ದೇವಯಾನಿ, ಮಾಧವಿ, ಮೇನಕೆ, ಶಕುಂತಲೆ ಹೀಗೆ ದೊಡ್ಡ ಪಟ್ಟಿಯೇ ಇದೆ. ಎಷ್ಟೆಲ್ಲ ಸಂಕಟಗಳ ಮಧ್ಯೆಯೂ ಇವರು ತಮ್ಮತನವನ್ನು ಕಳೆದುಕೊಳ್ಳುವುದಿಲ್ಲ. ಸ್ವತಃ ಸತ್ಯವತಿ ಸಣ್ಣವಳಿದ್ದಾಗಲೇ ವ್ಯಾಸರ ಸಂಪರ್ಕ ಹೊಂದಿ ಬಸಿರಾಗಿ ಹೆಣ್ಣು ಬದುಕು ಒಡ್ಡುವ ಸಂಕಟಗಳನ್ನು ಅನುಭವಿಸಿದವಳು. ತಂದೆಯಿಂದ ವಸ್ತುವಾಗಿ ನೀಡಲ್ಪಟ್ಟ ಮಾಧವಿಯನ್ನು ಎಲ್ಲವರೂ ದೇಹವಾಗಿಯೇ ಕಂಡವರು. ಈಕೆ ನೋವಿನಿಂದ 'ನಾ ನಾಳೆ ತಂದೆಗೆ ಮಗಳೆ, ವಸ್ತುವೆ?' ಎಂಬ ಪ್ರಶ್ನೆ ಹಾಕುತ್ತಾಳೆ. ಕೊನೆಯಲ್ಲಿ ತಂದೆ ಆಕೆಗೆ ಸ್ವಯಂವರ ಏರ್ಪಡಿಸಿದಾಗ 'ನರರ ಸಖ್ಯಕೆ ಮಿಗಿಲು ಕಾಡಿನ ಮರದ ಸಖ್ಯವು' ಎಂದು ನಿರ್ಧರಿಸಿ ಕಾಡಿಗೆ ನಿರ್ಗಮಿಸುತ್ತಾಳೆ. ವಿಶ್ವಾಮಿತ್ರನ ತಪೋಭಂಗಕ್ಕಾಗಿ ಇಂದ್ರ ಕಳಿಸಿದ ಮೇನಕೆಯ ಜೊತೆಗೆ ಸಂಗ ಮಾಡುವ ವಿಶ್ವಾಮಿತ್ರ ನಂತರದಲ್ಲಿ ಆಕೆಗೆ 'ಮಾನವತಿಯೇ ನೀನು?' ಎಂದು ಬೈದು ಭಂಗಿಸುತ್ತಾನೆ. ರಾಜರಾದರೂ ಮುನಿಗಳಾದರೂ ಹೆಣ್ಣಿನ ವಿಷಯದಲ್ಲಿ ತೋರುವ ನಡವಳಿಕೆ ಹೆಚ್ಚೇನೂ ಭಿನ್ನವಲ್ಲ ಎಂಬುದನ್ನು ಈ ಕತೆಗಳು ಕಾಣಿಸುತ್ತಾ ಹೋಗುತ್ತವೆ. ಹೀಗಿದ್ದರೂ ಈ ಹೆಣ್ಣುಮಕ್ಕಳು ನೆಲಕಚ್ಚದೇ ಮುಂದಡಿಯಿಡುತ್ತಾರೆ.

**ಕರ್ತೃತ್ವ ಶಕ್ತಿ:**

ಇಲ್ಲಿನ ಹೆಣ್ಣುಮಕ್ಕಳು ಕೇವಲ ಭೋಗದ ವಸ್ತುಗಳು ಅಥವಾ ಪರಿಸ್ಥಿತಿಯ ಕೈಗೊಂಬೆಗಳು ಅಷ್ಟೇ ಆಗಿ ಕಾಣುವುದಿಲ್ಲ. ಇವರು ಪ್ರತಿಕೂಲ ಸಂದರ್ಭದಲ್ಲಿ ಕರ್ತೃತ್ವ ಶಕ್ತಿ ಮೆರೆಯುತ್ತಾರೆ, ಛಲಗಾತಿಯರಾಗಿ, ಕೊಂಡ ಹಾದವರಾಗಿ ಕಾಣುತ್ತಾರೆ. ಇಲ್ಲಿನ ಸತ್ಯವತಿ, ಅಂಬೆ, ಶಕುಂತಲೆ, ಗಾಂಧಾರಿ ಮುಂತಾದ ಪಾತ್ರಗಳು ಬಲಿಪಶುಗಳಲ್ಲ. ತಮಗೊದಗಿದ ಸಂಕಟದ ಹೊತ್ತಿನಲ್ಲಿ ಇವರು ತಮಗೆ ಅನ್ಯಾಯವಾದಾಗಲೂ ಧೀರತೆ ಮೆರೆಯುತ್ತಾರೆ. ತನ್ನನ್ನು ಮೋಹಿಸಿ ಬಂದ ಹುಂಡನಿಗೆ ಅಶೋಕಸುಂದರಿ 'ದೇಹವನೆ ಮೋಹಿಸುವ ಪುರುಷರ ಮೋಹವೇತಕೆ-ನಿನ್ನ ಬಲೆಯಲಿ ಸಿಗುವ ಮಿಕವಲ್ಲ' ಎಂದು ದಿಟ್ಟವಾಗಿ ಹೇಳುತ್ತಾಳೆ, ತಾನು ಮೆಚ್ಚಿದ ನಹುಷನನ್ನು ವರಿಸುತ್ತಾಳೆ. ಶಕುಂತಲೆಯನ್ನು ದುಶ್ಯಂತ ಮರೆತ ಹೊತ್ತಲ್ಲಿ ಮುನಿಗಳು 'ಸುಮ್ಮನೆಲ್ಲವ ಸಹಿಸಿ ನುಂಗುವುದೆಮ್ಮ ಜೀವನವಾಗಬಾರದು' 'ಸಾತ್ವಿಕ ಕೋಪವೆಂಬುದು ನಮ್ಮ ಸಂಪದ' ಎನ್ನುವ ಮಾತು ಎಲ್ಲವನ್ನೂ ಸಹಿಸಿ ಬದುಕುವುದೇ ಉತ್ತಮ ಹೆಣ್ಣಿನ ಲಕ್ಷಣ ಎಂಬ ತಿಳುವಳಿಕೆಯನ್ನು ಒಪ್ಪುವುದಿಲ್ಲ. ಅಯೋಧ್ಯೆಗೆ ಶಕುಂತಲೆ

ಮಗನೊಂದಿಗೆ ಹೋದ ಸಂದರ್ಭದಲ್ಲಿ ಅವರನ್ನು ಗುರುತಿಸದ ದುಶ್ಯಂತ ಕೊನೆಗೆ ಅನಿವಾರ್ಯವಾಗಿ ಒಪ್ಪಿಕೊಳ್ಳುವ ಪ್ರಸಂಗ ಬಂದಾಗ ಸ್ವಾಭಿಮಾನಿ ಶಕುಂತಲೆ, 'ಕ್ಷಮಿಸರಸ ಬಾರೆನಿಂತು' ಎಂದು ದಿಟ್ಟವಾಗಿ ನುಡಿಯುತ್ತಾಳೆ.

**ಸಂವಾದ:**

ಇಡೀ ಕಾವ್ಯ ಕತೆಯನ್ನು ಇಮದಿತ್ಥಂ ಎಂದು ಹೇಳುವ ಬಗೆಯಲ್ಲಿಲ್ಲದೇ ಸಂವಾದದ ಮಾದರಿಯಲ್ಲಿದೆ. ಕತೆ ಹೇಳುತ್ತಾ ಇಲ್ಲಿನ ಹೆಂಗಳೆಯರು ಸೂಸುವ ನಿಟ್ಟುಸಿರು, ಅನುಭವಿಸುವ ವೇದನೆ ನಮಗೂ ತಾಕುತ್ತದೆ. ಸತ್ಯವತಿ ಹೆಣ್ಣಾಗಿ ಹಲವು ಸಂಕಟ ಸಂಭ್ರಮಗಳನ್ನು ಕಂಡವಳಾದ್ದರಿಂದ ಆ ಹೆಣ್ಣುಗಳ ಸಂಕಟದ ಒಳಹೊಕ್ಕು ಅರಿಯುವುದು ಆಕೆಗೆ ಸಾಧ್ಯವಾಗಿದೆ. ಹೀಗಾಗಿರುವುದರಿಂದಲೇ ಒಂದು ಬಗೆಯ ತಾದಾತ್ಮ್ಯ ಸಾಧ್ಯವಾಗುತ್ತದೆ. ಓದುಗರಿಗೂ ನಿರೂಪಿಸುವವರಿಗೂ ಒಂದು ಬಗೆಯ ನಂಟು ಏರ್ಪಡುತ್ತದೆ. ನಮ್ಮ ಹಳೆಯ ಕಾವ್ಯಗಳೂ ಕೇಳುವ, ಹೇಳುವ ಪರಂಪರೆಯವೇ ಆದರೂ ಇಳಾಭಾರತ ಅವಕ್ಕಿಂತ ಭಿನ್ನವಾಗಿ ವಿಶಿಷ್ಟವಾಗಿ ನಿಲ್ಲುತ್ತದೆ. ಪ್ರಧಾನ ಧಾರೆಯಲ್ಲಿ ಕಾಣದ ಬದುಕಿನ ವಿವರಗಳು ಇಲ್ಲಿ ಕಾಣಸಿಗುತ್ತವೆ. ಹೀಗಾಗಿ ಈ ಕಾವ್ಯ ಬಹುದನಿಗಳನ್ನು ಕೇಳಿಸುತ್ತದೆ.

**ಸಾಮಾನ್ಯ ಜನಜೀವನ:**

ಕಾವ್ಯದ ಆರಂಭದಲ್ಲೇ ಕವಿ ಧರಣೀದೇವಿಯವರು ಮಹಿಳೆಯರ ಬದುಕಿನ ಜೊತೆಗೆ 'ಸಾಮಾನ್ಯ ಜನಜೀವನವನ್ನು ಕಾವ್ಯದಲ್ಲಿ ಬಿಂಬಿಸಲು ಯತ್ನಿಸಿದ್ದೇನೆ' ಎಂದ ಮಾತು ಮಹತ್ವದ್ದು. ಇಡೀ ಕಾವ್ಯ ಈ ಬಗೆಯ ಜೀವಪರ ದೃಷ್ಟಿಯನ್ನು ಹೊಂದಿದೆ. ಉದಾಹರಣೆಗೆ ಅಡವಿಯಲ್ಲಿ ವಾಸಿಸುವ ಜನರ ಕುರಿತಾದ ಈ ಸಾಲುಗಳನ್ನು ಗಮನಿಸಬಹುದು, 'ದೇವನೀ ಜಗದಲ್ಲಿ ಸೃಷ್ಟಿಪ ಜೀವಜಾತಕ್ಕೆಲ್ಲ ಹಕ್ಕಿದೆ, ಜೀವಿಸಲು ನಿರ್ಭಯದ ನೆಲೆಯಲ್ಲೆನುವ ತತ್ವವನು, ನಾವು ನಂಬುತ ಬಾಳುತಿರುವೆವು, ಜೀವ ಸಮತೋಲನವ ವಿಪಿನದಿ ಕಾವವರು, ವನಗಳನು ತೊತ್ತಳತುಳಿವರಲ್ಲ' ಎಲ್ಲ ಜೀವಿಗಳಿಗೂ ಬದುಕುವ ಹಕ್ಕಿದೆ ಎಂಬ ಈ ಮಾತು ಮುಖ್ಯವಾದುದಾಗಿದೆ. ಜೊತೆಗೆ ಅರಮನೆಯ ದಾಸಿಯರು, ಸಾಮಾನ್ಯ ಜನರು ಕೇವಲ ಆಳುವವರ ಸೇವೆ ಮಾಡಲು ಇರುವವರಾಗಿ ಕಾಣದೇ ಸ್ವತಂತ್ರ ವ್ಯಕ್ತಿತ್ವವುಳ್ಳವರಾಗಿ, ಮಾನವೀಯತೆ ಮೆರೆಯುವವರಾಗಿ ಕಾಣುತ್ತಾರೆ.

**ಕಾಣ್ಕೆ:**

ಇಡೀ ಕಾವ್ಯ ಸಮಾಜದಲ್ಲಿ ಹೆಣ್ಣನ್ನು ನೋಡುವ ಬಗೆಯನ್ನು ಆಳವಾಗಿ ವಿಶ್ಲೇಷಿಸಿ ವ್ಯಾಖ್ಯಾನಿಸುತ್ತಾ ಪ್ರಶ್ನಿಸುತ್ತಾ ಅದನ್ನು ಮುರಿದು ಕಟ್ಟುವ ಕಡೆಗೆ ಎಳಸುತ್ತದೆ. ಒಂದೆಡೆ ಸತ್ಯವತಿ, 'ಹೆಣ್ಣು ವೃತ್ತ, ಪುರುಷ ವ್ಯಾಸ, ಬೆನ್ನು ಬಾಗುವ ಕಟ್ಟುವಡೆಯುವ ಗುಣ ಹೆಣ್ಣಿನದಾದರೆ ಸರಳರೇಖೆಗೆ ಗುರಿಯೆ ಮುಖ್ಯವು' ಎನ್ನುವುದು ಗಂಡಿನ ಸಾಧನೆಯ ಹಪಹಪಿ, ಹೆಣ್ಣಿನ ಎಲ್ಲರನ್ನು ಪೋಷಿಸುವ ಕಾಳಜಿಯನ್ನು ಮುಖಾಮುಖಿಯಾಗಿಸುತ್ತದೆ.

ದಾಶರಾಜ ಒಮ್ಮೆ ಗಂಡಿನ ಬಲೆಗೆ ಸಿಲುಕಿ ನಲುಗಿದ ಮಗಳನ್ನು ಕುರಿತು 'ಹರಿದ ಬದುಕನು ಹೊಲಿ ಮಗಳೆ ನೀ' ಎಂದಾಗ ಸತ್ಯವತಿ, 'ಅಂತೆ ನಾ ಪರಿಪೂರ್ಣೆ, ಹೊಲಿಯುವ ಕಂತೆಯಲ್ಲವು ನನ್ನ ಬಾಳ್, ಬಿಡು ಸಂತವಿಡುವುದದೇಕೆ ಮನವದು ಚಿಂದಿಯಾಗಿಲ್ಲ' ಎನ್ನುವ ಮಾತು ಬಹಳ ದಿಟ್ಟವಾದುದು. ಹಾಗೆಯೇ ಆಕೆಯನ್ನು ಶಂತನುವಿಗೆ ಮದುವೆ ಮಾಡಿಕೊಡುವ ಹೊತ್ತಲ್ಲಿ ತಂದೆ, 'ಸ್ವಾತಂತ್ರ್ಯ ಬಲುಘನವೆನ್ನುವ ಸತ್ಯವತಿ'ಯನ್ನು ಆಳಾಗಿಸಿ ಕಳಿಸುತ್ತಿದ್ದೇನೆ ಎಂದು ವಿಷಾದ ವ್ಯಕ್ತಪಡಿಸುವ ಬಗೆ ಕವಿ ಪ್ರತಿ ಪಾತ್ರ ಸೃಷ್ಟಿಸುವಾಗಲೂ ಎಷ್ಟು ಸೂಕ್ಷ್ಮವಾಗಿ, ಆಳವಾಗಿ ಚಿಂತನೆ ನಡೆಸಿದ್ದಾರೆ ಎಂಬುದನ್ನು ಸೂಚಿಸುತ್ತದೆ.

ಇದು ಹೆಣ್ಣಿನಿಂದ ಅಪೇಕ್ಷಿಸುವ ವರ್ತನೆ, ಇದು ಗಂಡಿನಿಂದ ಅಪೇಕ್ಷಿಸುವ ವರ್ತನೆ ಎಂದು ಸಮಾಜ ಕಟ್ಟುಗಳನ್ನು ಹಾಕಿಬಿಟ್ಟಿದೆ. ಇವು ನಮ್ಮ ಸಹಜ ಬೆಳವಣಿಗೆಯನ್ನು ನಿರ್ಬಂಧಿಸುವ ಸಂಗತಿಗಳಾಗಿವೆ. ಇವುಗಳನ್ನು ನಾವು ಪ್ರಶ್ನೆ ಮಾಡಬೇಕಿದೆ. ಕಾವ್ಯದಲ್ಲಿ

ಬರುವ 'ಒನಪು ವಯ್ಯಾರಗಳು ಹೆಣ್ಣಿಗೆ, ಘನವು ಗಂಡಿಗೆ ಗಡಸು ನಡಿಗೆಯದೆನುವುದೆಲ್ಲವು ಗ್ರಹಿಕೆ ಸೃಷ್ಟಿಗೆ ತನ್ನ ನಡೆಯಿಹುದು" ಎಂಬ ಮಾತು ಈ ಕಟ್ಟಳೆಗಳನ್ನು ಬದಿಗೆ ಸರಿಸುತ್ತದೆ. ಹಾಗೆಯೇ 'ಹೆಣ್ಣು ಮಾಯೆ' ಎನ್ನುವ ಸಮಾಜಕ್ಕೆ 'ಹೆಣ್ಣು ಗಂಡಿಗೆ ಮಾಯೆ ಗಂಡೇ ಹೆಣ್ಣ ಕಾಡುವ ಮಾಯೆಯದರಲಿ ಬಣ್ಣನೆಯ ಮಾತಿಲ್ಲ ಮನದ ವಿಕಾರವೇ ಮಾಯೆ, ಮಣ್ಣ ಸೇರಿದ ಮೇಲೆ ದೇಹವು ಹೆಣ್ಣೋ ಗಂಡೋ? ಮೂಳೆ ಮಾಂಸವು ಹೆಣ್ಣು ಮಾಯೆಯದಲ್ಲ, ಮನದ ವಿಕಾರವೇ ಮಾಯೆ' ಎಂಬ ಮಾತು ಹೊಸ ದಿಕ್ಕು ತೋರಬಲ್ಲದು.

ಹೆಣ್ಣು ಎಂದರೆ ದೇಹ, ಹೆಣ್ಣಿನ ಸಾಂಗತ್ಯ ಎಂದರೆ ದೈಹಿಕ ಸುಖ ಎಂಬ ಸೀಮಿತ ನೆಲೆಯಲ್ಲಿ ಯೋಚಿಸುವವರಿಗೆ ಹೆಣ್ಣು ಲೋಕದ ಭಾವಸತ್ಯ ಮತ್ತು ದೇಹ ಸತ್ಯಗಳು ಅರಿವಿಗೆ ನಿಲುಕುವುದಿಲ್ಲ. 'ಮೋಹವಷ್ಟೇ ಪ್ರೀತಿಯಲ್ಲವು ದೇಹದಾಚೆಯ ಭಾವಲೋಕದಿ ಹೆಣ್ಣು ಬಾಳುವಳು' ಎಂಬ ಮಾತು ಇಲ್ಲಿ ಕಾಣುವ ಎಷ್ಟು ಮಂದಿ ಪುರುಷರಿಗೆ ಅರ್ಥವಾಗಿದೆ? ಎಂಬ ಪ್ರಶ್ನೆ ಹಾಕಿಕೊಂಡಾಗ ಹೆಣ್ಣಿನ ಬವಣೆಗಳಿಗೆ ಕಾರಣವೇನು ಎಂಬುದು ಗೊತ್ತಾಗುತ್ತದೆ. ಹೀಗೆ ಹೆಣ್ಣಿನ ಲೋಕದ ಪದರಗಳನ್ನು ಈ ಕೃತಿ ತೋರುವ ಪ್ರಯತ್ನ ಮಾಡುತ್ತದೆ.

**ಮೌಲ್ಯ:**

ಪ್ರತಿ ಕಾವ್ಯವೂ ಫಲಶ್ರುತಿಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಪ್ರಸ್ತುತ ಕೃತಿಯ ಆಶಯ ಈ ಕೆಳಗಿನ ಪದ್ಯದಲ್ಲಿ ನಿಚ್ಚಳವಾಗಿ ವ್ಯಕ್ತವಾಗಿದೆ,

ನೀತಿ ಗೆಲುವು ಲೋಕದಲಿ ಸಂ
ಪ್ರೀತಿ ಗೆಲುವುದು ರೋಷದೆದುರಲಿ
ರೀತಿ ಗೆಲುವುದು ಶಿಸ್ತಿರದ ಜೀವನದ ಶೈಲಿಯೊಡೆ,
ಗೀತೆ ಗೆಲಲಿಹುದಾರ್ಭಟದ ಜೊತೆ
ಸಾಥಿ ಗೆಲುವುದು ಜಗಳದೊಡನಾ
ಭೀತಿ ಸಾವುದು ನೀತಿಯನು ಬಳಿವಿಡಿದು ಬಾಳಿದೊಡೆ

ಹೀಗೆ ನೋಡಿದಾಗ ಇಲ್ಲಿನ ನೋಟ ಎಲ್ಲರನ್ನು ಒಳಗೊಳ್ಳುವ ನೋಟವಾಗಿ ನಮಗೆ ಕಾಣುತ್ತದೆ. ಮನುವಿನ ಮಗಳಾದ ಸ್ವಾಯತ್ತತೆ ಮೆರೆಯುವ 'ಇಳಾ' ಇಂದಿನ ದಿಟ್ಟ ಮಹಿಳೆಯ ಮಾತೃಕೆಯಾಗಿ ಕಾಣುತ್ತಾಳೆ. ಆಕೆಯನ್ನು, ಒಟ್ಟಾರೆಯಾಗಿ ಹೆಣ್ಣುಮಕ್ಕಳನ್ನುಪ್ರತಿನಿಧಿಸುವಂತೆ ಕೃತಿಯ ಹೆಸರಿನಲ್ಲಿರುವ 'ಇಳಾ' ಗೋಚರಿಸುತ್ತದೆ. ಈ ನೆಲದ ನೋಟ ಚರಿತ್ರೆ ಪುರಾಣಗಳ ಗಾಯಗಳನ್ನು ಕಾಣಿಸುತ್ತಾ ಇಂದಿನ ಬದುಕು ಕಟ್ಟಲು ಬೆಳಕು ತೋರಬಲ್ಲದು ಎಂದು ಅನಿಸುತ್ತದೆ.
ಪ್ರಮುಖ ಪದಗಳು: ಹೆಣ್ಣಿನ ಕಣ್ಣೋಟ, ಸ್ವಾಯತ್ತತೆ, ಕರ್ತೃತ್ವ ಶಕ್ತಿ, ಅಧಿಕಾರ ರಾಜಕಾರಣ

ಅಂಬೆ: 'ತನ್ನ ಮಹದಸ್ಮಿತೆಯನುಳಿಸುವ ಹೆಣ್ಣ ಕುಟಿಲೆಯೆನುವುದು ಲೋಕವು, ಮುನ್ನ ಬಾಯಿರದಂತೆ ಬಾಳಿದರೆಲ್ಲ ಸಾಧ್ವಿಗಳೆ?'

**ಆಧಾರ ಗ್ರಂಥಗಳು:**


1. Pattanaik, Devdutt. 2010. *Jaya*, Penguin Random House, India.
2. Vedavyasa. 2012 ed.*Mahabharatha Volumes*, Munshiram Manoharlal Publishing Pvt Ltd.
3. Karve, Iravathi. 1968. *Yugantha*, Orient Blackswan.
4. Banerjee, Divakaruni Chitra. 2008. *The Palace of Illusions*, Picador.
5. Tharu, Susie J., and Ke Lalita. 1993. *Women Writing in India*, vol. 2: The Twentieth Century. New York: Feminist Press.